# ಪೌರಸಭಾ ತೆರಿಗೆ ವಿಧಿಸುವಿಕೆ (ಕರ್ನಾಟಕ ವ್ಯಾಪ್ತಿ) ಅಧಿನಿಯಮ, 1973

(ಕರ್ನಾಟಕ ರಾಜ್ಯಪತ್ರ, ಗುರುವಾರ ಫೆಬ್ರವರಿ 10, 2005 ಭಾಗ–4ಎ ಪುಟ 73 ರಿಂದ 74ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪೌರಸಭಾ ತೆರಿಗೆ ವಿಧಿಸುವಿಕೆ ಅಧಿನಿಯಮ, 1881ನ್ನು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತಗೊಳಿಸುವುದು
3. ವ್ಯಾಪ್ತಗೊಳಿಸಲಾದ ಅಧಿನಿಯಮವನ್ನು ಅರ್ಥೈಸುವಲ್ಲಿ ನ್ಯಾಯಾಲಯಗಳು ಮತ್ತು ಇತರ ಪ್ರಾಧಿಕಾರಗಳ ಅಧಿಕಾರಗಳು


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1974ರ ಅಧಿನಿಯಮ 13:–** ಪೌರಸಭಾ ತೆರಿಗೆ ವಿಧಿಸುವಿಕೆ ಅಧಿನಿಯಮ, 1881 ಒಂದು ಕೇಂದ್ರ ಕಾನೂನಾಗಿದ್ದು, ಅದು ಹಿಂದಿನ 'ಬಿ' ಭಾಗದ ರಾಜ್ಯಗಳಲ್ಲಿ ಅಡಕವಾಗಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರ ಪ್ರದೇಶಗಳಲ್ಲಿ ಜಾರಿಯಲ್ಲಿದೆ. ಇದು, ಪೌರಸಭಾ ತೆರಿಗೆಗಳನ್ನು ವಿಧಿಸುವುದರಿಂದ ಸಶಸ್ತ್ರ ದಳಗಳ ಸಿಬ್ಬಂದಿಗೆ ವಿನಾಯಿತಿ ನೀಡುವ ಅಧಿಕಾರಗಳನ್ನು ಪ್ರದಾನ ಮಾಡುತ್ತದೆ. ಈ ಅಧಿನಿಯಮವನ್ನು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತಗೊಳಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ IV– 2ಎ, ದಿನಾಂಕ 26 ನೇ ಫೆಬ್ರವರಿ 1973 ರಲ್ಲಿ ಸಂಖ್ಯೆ 177 ಎಂಬುದಾಗಿ ಪ್ರಕಟಿಸಲಾಗಿದೆ)

* * *

# 1974ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 13

(1974ರ ಮೇ ಒಂಬತ್ತನೇ ದಿನದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟವಾಗಿದೆ)

## ಪೌರಸಭಾ ತೆರಿಗೆ ವಿಧಿಸುವಿಕೆ ([1][ಕರ್ನಾಟಕ][1] ವ್ಯಾಪ್ತಿ) ಅಧಿನಿಯಮ, 1973

(1974ರ ಏಪ್ರಿಲ್ ಇಪ್ಪತ್ತೇಳನೇ ದಿನದಂದು ರಾಜ್ಯಪಾಲರ ಅನುಮೋದನೆ ಪಡೆಯಲಾಗಿದೆ)

ಪೌರಸಭಾ ತೆರಿಗೆ ವಿಧಿಸುವಿಕೆ ಅಧಿನಿಯಮ, 1881ನ್ನು ಇಡೀ [1][ಕರ್ನಾಟಕ][1] ರಾಜ್ಯಕ್ಕೆ ವ್ಯಾಪ್ತಗೊಳಿಸಲು ಉಪಬಂಧಿಸುವ ಒಂದು ಅಧಿನಿಯಮ.

ಪೌರಸಭಾ ತೆರಿಗೆ ವಿಧಿಸುವಿಕೆ ಅಧಿನಿಯಮ, 1881ನ್ನು (1881ರ ಕೇಂದ್ರ ಆಧಿನಿಯಮ 11) ಇಡೀ [1][ಕರ್ನಾಟಕ][1] ರಾಜ್ಯಕ್ಕೆ ವ್ಯಾಪ್ತಗೊಳಿಸಲು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಇಪ್ಪತ್ತನಾಲ್ಕನೇ ವರ್ಷದಲ್ಲಿ [1][ಕರ್ನಾಟಕ][1] ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು, ಎಂದರೆ:-

1. 1978ರ ಅಧಿನಿಯಮ 21ರ ಮೂಲಕ 15.09.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಪೌರಸಭಾ ತೆರಿಗೆ ವಿಧಿಸುವಿಕೆ ([1][ಕರ್ನಾಟಕ][1] ವ್ಯಾಪ್ತಿ) ಅಧಿನಿಯಮ, 1973 ಎಂದು ಕರೆಯತಕ್ಕದ್ದು.

1. 1978ರ ಅಧಿನಿಯಮ 21ರ ಮೂಲಕ 15.09.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) ಇದು ಇಡೀ [1][ಕರ್ನಾಟಕ][1] ರಾಜ್ಯಕ್ಕೆ ವ್ಯಾಪ್ತವಾಗತಕ್ಕದ್ದು.

1. 1978ರ ಅಧಿನಿಯಮ 21ರ ಮೂಲಕ 15.09.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) ಇದು ಕೂಡಲೇ ಜಾರಿಗೆ ಬರತಕ್ಕದ್ದು.

**2. ಪೌರಸಭಾ ತೆರಿಗೆ ವಿಧಿಸುವಿಕೆ ಅಧಿನಿಯಮ, 1881ನ್ನು ಇಡೀ [1][ಕರ್ನಾಟಕ][1] ರಾಜ್ಯಕ್ಕೆ ವ್ಯಾಪ್ತಗೊಳಿಸುವುದು.–** (1) ಪೌರಸಭಾ ತೆರಿಗೆ ವಿಧಿಸುವಿಕೆ ಅಧಿನಿಯಮ, 1881ನ್ನು (1881ರ ಕೇಂದ್ರ ಅಧಿನಿಯಮ 11) (ಇದರಲ್ಲಿ ಇನ್ನು ಮುಂದೆ ವ್ಯಾಪ್ತಿಗೊಳಿಸಲಾದ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) ಈ ಮೂಲಕ ಇಡೀ [1][ಕರ್ನಾಟಕ][1] ರಾಜ್ಯಕ್ಕೆ ವ್ಯಾಪ್ತಗೊಳಿಸತಕ್ಕದ್ದು ಮತ್ತು ಅದು ಇಡೀ [1][ಕರ್ನಾಟಕ][1] ರಾಜ್ಯದಲ್ಲಿ ಜಾರಿಗೆ ಬರತಕ್ಕದ್ದು.

1. 1978ರ ಅಧಿನಿಯಮ 21ರ ಮೂಲಕ 15.09.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(2) (1) ನೇ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ವ್ಯಾಪ್ತಗೊಳಿಸಲಾದ ಅಧಿನಿಯಮದ 1ನೇ ಪ್ರಕರಣದಲ್ಲಿ "ಬಿ ಭಾಗದ ರಾಜ್ಯಗಳಲ್ಲಿ" ಎಂಬ ಪದಗಳು ಮತ್ತು ಅಕ್ಷರದ ತರುವಾಯ " ರಾಜ್ಯಗಳ ಪುನರ್‌ವಿಂಗಡಣೆ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 37) 7ನೇ ಪ್ರಕರಣದ (1) ನೇ ಉಪ ಪ್ರಕರಣದ (ಎ) ಖಂಡ ಮತ್ತು (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ರಾಜ್ಯ ಕ್ಷೇತ್ರಗಳನ್ನು ಹೊರತುಪಡಿಸಿ" ಎಂಬ ಪದಗಳು, ಆವರಣಗಳು, ಅಂಕಿಗಳು ಮತ್ತು ಅಕ್ಷರಗಳನ್ನು ಸೇರಿಸತಕ್ಕದ್ದು.

**3. ವ್ಯಾಪ್ತಗೊಳಿಸಲಾದ ಅಧಿನಿಯಮವನ್ನು ಅರ್ಥೈಸುವಲ್ಲಿ ನ್ಯಾಯಾಲಯಗಳು ಮತ್ತು ಇತರ ಪ್ರಾಧಿಕಾರಗಳ ಅಧಿಕಾರಗಳು.–** ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು, ವ್ಯಾಪ್ತಗೊಳಿಸಲಾದ ಅಧಿನಿಯಮವನ್ನು ಇಡೀ [1][ಕರ್ನಾಟಕ][1] ರಾಜ್ಯಕ್ಕೆ ಅನ್ವಯಿಸಲು ಅನುಕೂಲ ಮಾಡಿಕೊಡುವ ಉದ್ದೇಶಕ್ಕಾಗಿ, ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಮುಂದಿರುವ ವಿಷಯಕ್ಕೆ

ಅದನ್ನು ಅಳವಡಿಸಲು ಮುಖ್ಯ ವಿಷಯಕ್ಕೆ ಬಾಧಕವಾಗದಂತೆ ಅವಶ್ಯಕ ಮತ್ತು ಯುಕ್ತವಾಗಬಹುದಾದಂಥ ಬದಲಾವಣೆಗಳೊಂದಿಗೆ ಅದನ್ನು ಅರ್ಥೈಸಬಹುದು.

1. 1978ರ ಅಧಿನಿಯಮ 21ರ ಮೂಲಕ 15.09.1978ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

* * *

The above translation of the municipal taxation (Karnataka extention) Act, 1973 (13 of 1974) shall be authoritative text in the Kannada Language under section 5A of the Karnataka Official Language Act, 1963 (Karnataka Act 26 of 1963)

GOVERNOR OF KARNATAKA

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ದಕ್ಷಿಣಾಮೂರ್ತಿ)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

RKB